

ಇತಿಹಾಸದಲ್ಲಿ ಯಾವತ್ತೂ ಈ ರೀತಿಯ ಹೊಡೆತ ಅರಮನೆಗೆ ಬಿದ್ದಿರಲಿಲ್ಲ. ಲಾಕ್‌ಡೌನ್ ತೆರವುಗೊಳಿಸಿದ್ದರೂ ಜನ ಬರುತ್ತಿಲ್ಲ. ಕೋವಿಡ್ ಭಯದಲ್ಲೇ ಇದ್ದಾರೆ. ಪ್ರವಾಸಿಗರು ನೀಡುವ ಶುಲ್ಕವೇ ನಮ್ಮ ಆದಾಯ. ಎಲ್ಲವೂ ಸರಿ ಹೋಗಲು ಇನ್ನೂ ಒಂದು ವರ್ಷ ಬೇಕು. ಈಗ ಬರುವ ಪ್ರವಾಸಿಗರನ್ನು ಸ್ಕ್ರೀನಿಂಗ್ ಮಾಡಿಯೇ ಒಳಬಿಡಲಾಗುತ್ತಿದೆ. ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದೇವೆ. ಪ್ರವಾಸಿಗರು ಧೈರ್ಯವಾಗಿ ಬರಬಹುದು.

**-ಟಿ.ಎಸ್.ಸುಬ್ರಮಣ್ಯ,**
**ಅರಮನೆ ಮಂಡಳಿ ಉಪನಿರ್ದೇಶಕ ಮೈಸೂರು**

ನಿಸರ್ಗಧಾಮದಲ್ಲಿ ಪ್ರವಾಸಿಗರ ಕಲರವ ಕೇಳಿಸುತ್ತಿದೆ.

ಸೆ.15ರ ಬಳಿಕ ಮತ್ತಷ್ಟು ಪ್ರವಾಸಿ ತಾಣಗಳು ಪ್ರವಾಸಿಗರಿಗೆ ಮುಕ್ತವಾಗಲಿವೆ. ಇದರಿಂದ ಪ್ರವಾಸೋದ್ಯಮವನ್ನೇ ಅವಲಂಬಿಸಿ ಜೀವನ ನಡೆಸುತ್ತಿದ್ದವರ ಮೊಗದಲ್ಲಿ ಮಂದಹಾಸ ಮೂಡುವ ಲಕ್ಷಣಗಳು ಕಾಣಿಸುತ್ತಿವೆ. ಅಬ್ಬಿ ಜಲಪಾತ, ರಾಜಾಸೀಟ್, ನಿಸರ್ಗಧಾಮ, ಮಲ್ಲಳ್ಳಿ ಜಲಪಾತ, ದುಬಾರೆ, ಚೇಲಾವರ ಜಲಪಾತ, ಇರ್ಪು ಜಲಪಾತ ಹಾಗೂ ತಲಕಾವೇರಿ ಸದಾ ಪ್ರವಾಸಿಗರಿಂದ ಮಿಜಿಗುಡುತ್ತಿದ್ದ ತಾಣಗಳಾಗಿದ್ದವು. ಆರು ತಿಂಗಳ ಅಜ್ಞಾತವಾಸವನ್ನು ಮುಗಿಸಿ ಅವೀಗ ಅತಿಥಿಗಳನ್ನು ಎದುರುಗೊಳ್ಳಲು ಸಜ್ಜಾಗುತ್ತಿವೆ.

## ಬುಕಿಂಗ್ ಆರಂಭ

ಕೊಡಗಿನಲ್ಲಿ ಕೊರೊನಾ ಭೀತಿ ಹೆಚ್ಚಾದ ಮೇಲೆ ಮಾರ್ಚ್ 20ರ ಬಳಿಕ ಹೋಮ್ ಸ್ಟೇ ಹಾಗೂ ರೆಸಾರ್ಟ್‌ಗಳು ಬಂದ್ ಆಗಿದ್ದವು. ಜಿಲ್ಲಾಡಳಿತವೇ ಹೋಮ್ ಸ್ಟೇ, ರೆಸಾರ್ಟ್ ಮುಚ್ಚುವಂತೆ ಅಧಿಕೃತ ಆದೇಶ ಹೊರಡಿಸಿತ್ತು. ಇದೀಗ ಅವುಗಳನ್ನು ತೆರೆಯಲು ಅವಕಾಶ ನೀಡಲಾಗಿದ್ದು, ಹೋಮ್ ಸ್ಟೇ ಹಾಗೂ ರೆಸಾರ್ಟ್ ಮಾಲೀಕರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಬುಕಿಂಗ್ ಸಹ ಆರಂಭವಾಗಿದೆ. ಲಾಕ್‌ಡೌನ್ ಅವಧಿಯಲ್ಲಿ ಹೋಮ್ ಸ್ಟೇಗಳಲ್ಲಿ ಕೆಲಸವಿಲ್ಲದೇ ಕಾರ್ಮಿಕರು ಊರಿಗೆ ತೆರಳಿದ್ದರು. ಅವರು ಮತ್ತೆ ವಾಪಸ್ಸಾಗುತ್ತಿದ್ದಾರೆ.


'ವರ್ಕ್ ಫ್ರಂ ಹೋಮ್' ನಿಯಮದಿಂದ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಕೊಡಗಿನ ಹೋಮ್‌ಸ್ಟೇಗಳಲ್ಲಿ ಕುಳಿತು ಕೆಲಸ ಮಾಡುತ್ತಿದ್ದಾರೆ. ಇಲ್ಲಿನ ಪ್ರಕೃತಿ ಮಡಿಲಿನ ಹೋಮ್ ಸ್ಟೇಗಳಲ್ಲಿ ಕಾಲ ಕಳೆಯುತ್ತಲೇ ಕೆಲಸ ಮಾಡುತ್ತಿದ್ದಾರೆ. ಅಕ್ಟೋಬರ್ ವೇಳೆಗೆ ಪ್ರವಾಸಿ ಚಟುವಟಿಕೆಗೆ ಇನ್ನಷ್ಟು ಮೆರುಗು ಬರಬಹುದು ಎಂಬ ನಿರೀಕ್ಷೆ ಪ್ರವಾಸೋದ್ಯಮ ಅವಲಂಬಿತರದ್ದು.

## ಹಂಪಿಯ ಕಲ್ಲುರಥ ಕಾದಿದೆ ಸೆಲ್ಫಿಗೆ

ಕನ್ನಡ ನಾಡಿನ ಇತಿಹಾಸದ ವೈಭವದ ಹೆಗ್ಗುರುತು ಹಂಪಿ. ವಿಶ್ವ ಪಾರಂಪರಿಕ ತಾಣ ಎಂದು ಗುರ್ತಿಸಲಾಗಿರುವ ಈ ಜಾಗ ಪ್ರವಾಸಿತಾಣವಾಗಿಯೂ ಸಾಕಷ್ಟು ಜನಪ್ರಿಯತೆ ಗಳಿಸಿತ್ತು. ಆದರೆ ಕಳೆದ ಕೆಲವು ತಿಂಗಳುಗಳಿಂದ ಹಂಪಿಯಲ್ಲಿ ಒತ್ತೊತ್ತಿಗೆ ಹತ್ತಿ ನಿಂತಿದ್ದ ಕಲ್ಲುಗಳೇ ಮಾತಾಡಿಕೊಳ್ಳುತ್ತಿದ್ದವೇ ವಿನಾ ಪ್ರವಾಸಿಗರ ಸುಳಿವಿರಲಿಲ್ಲ. ಹಾಗೆ ನೋಡಿದರೆ ಈಗಲೂ ಹಂಪಿಯಲ್ಲಿ ಪ್ರತಿವರ್ಷದಂತೆ ಹರ್ಷದ ಕೇಕೆ ಕೇಳುತ್ತಿಲ್ಲ. ಕಲ್ಲಿನ ರಥದ ಮುಂದೆ, ಮಾತಂಗ ಪರ್ವತದ ನೆತ್ತಿಯ ಮೇಲೆ, ವಿರೂಪಾಕ್ಷ ದೇವಾಲಯದ ಆವರಣದಲ್ಲಿ ಎಲ್ಲೆಂದರಲ್ಲಿ ನಿಂತು ಸೆಲ್ಫಿಗೆ ಮುಖವೊಡ್ಡುತ್ತಿದ್ದ ಪ್ರವಾಸಿಗರ ಗಜಿಬಿಜಿಯ ಒಂದಂಶವೂ ಇಲ್ಲ. ಆದರೆ ನಿಧಾನವಾಗಿ ಪ್ರವಾಸಿಗರು ಈ ಕ್ಷೇತ್ರದ ಕಡೆಗೆ ಮುಖಮಾಡುತ್ತಿರುವುದು ಬಿಸಿಲ ಬೇಗೆಯಲ್ಲಿಯೂ ಸ್ಥಳೀಯರಲ್ಲಿ ಸಮಾಧಾನದ ತಂಗಾಳಿಯಂತೆ ಭಾಸವಾಗುತ್ತಿದೆ.

ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಜುಲೈ 6ರಿಂದ ಜಾರಿಗೆ ಬರುವಂತೆ ಸಾರ್ವಜನಿಕರಿಗೆ ಹಂಪಿ ಸ್ಮಾರಕಗಳ ವೀಕ್ಷಣೆಯನ್ನು ಮುಕ್ತಗೊಳಿಸಿತು. ಒಂದೆರಡು ವಾರಗಳಲ್ಲಿ ಪರಿಸ್ಥಿತಿ ಸುಧಾರಿಸಿ, ಪ್ರವಾಸಿಗರು ತುಂಗೆಯ ತಟದತ್ತ ಮುಖ ಮಾಡಬಹುದು ಎಂಬ ನಿರೀಕ್ಷೆ ಇತ್ತು. ಪ್ರವಾಸಿಗರನ್ನೇ ನೆಚ್ಚಿಕೊಂಡು ಬದುಕು ಕಟ್ಟಿಕೊಂಡಿರುವ ಇಲ್ಲಿನ ಇನ್ನೂರಕ್ಕೂ ಹೆಚ್ಚು ಮಾರ್ಗದರ್ಶಿಗಳು (ಗೈಡ್‌ಗಳು), ನೂರಾರು ಆಸುಪಾಸಿನಲ್ಲಿರುವ ಹೋಟೆಲ್, ರೆಸಾರ್ಟ್ ಹಾಗೂ ಹೋಂ ಸ್ಟೇಗಳ ಮಾಲೀಕರು, ಅಲ್ಲಿ ಕೆಲಸ ನಿರ್ವಹಿಸುವ ನೂರಾರು ಜನರೂ ಅದನ್ನೇ ಕಾಯುತ್ತಿದ್ದರು. ಆರಂಭದಲ್ಲಿ ಹುಸಿಯಾಗಿದ್ದ ಅವರ ನಿರೀಕ್ಷೆ ಈಗ ಸ್ವಲ್ಪಮಟ್ಟಿಗೆ ಕೈಗೂಡುವ ಲಕ್ಷಣಗಳು ಕಂಡು ಬರುತ್ತಿವೆ. ಅವರ ವ್ಯವಹಾರ ನಿಧಾನವಾಗಿ ಹಳಿ ಮೇಲೆ ಬರುತ್ತಿದೆ.

ಮಳೆಗಾಲದಲ್ಲಿ ಹಂಪಿಯ ಬೆಟ್ಟ, ಗುಡ್ಡಗಳು, ಅದರ ಸುತ್ತಮುತ್ತಲಿನ ಪರಿಸರ ಹಚ್ಚ ಹಸಿರಾಗುತ್ತದೆ. ತುಂಗಭದ್ರೆ ಮೈದುಂಬಿಕೊಂಡು ಹರಿಯುತ್ತಾಳೆ. ತಂಪಾದ ವಾತಾವರಣದಲ್ಲಿ



ಹಂಪಿ ಒಂದು ವಿಹಂಗಮ ನೋಟ